ದಿನಾಂಕಃ 20-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವೈ ಎಂ ಅರ್ ವಕೀಲರಿಂದ**

1. ನನ್ನ ತಂದೆ ಅರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ. ಸದರಿಯವರಿಗೆ ಕಣ್ಣಿನ ದೃಷ್ಟಿ ದೋಷ ಮತ್ತು ಬಿ ಪಿ ಕಾಯಿಲೆಯಿಂದ ಬಳಲುತ್ತಿದ್ದಾರೆ. ನನ್ನ ತಂದೆಗೆ ಕಣ್ಣಿನ ದೃಷ್ಟಿಗೆ ಶಸ್ತ್ರಚಿಕಿತ್ಸೆಗೆ 3 ವರ್ಷಗಳ ಹಿಂದೆ ಒಳಗಾಗಿದ್ದಾರೆ. ನನ್ನ ತಂದೆ ನಿಪಿ-1 ನ್ನು 2024ರಲ್ಲಿ ಬರೆದುಕೊಟ್ಟಿರುತ್ತಾರೆ. ನನ್ನ ತಂದೆಗೆ 2024 ರಲ್ಲಿ ದೃಷ್ಟಿ ಸರಿಯಾಗಿ ಕಾಣಿಸುತ್ತಿರಲಿಲ್ಲ, ಸದರಿ ವಿಚಾರವನ್ನು ನಿಪಿ-1 ರಲ್ಲಿ ಉಲ್ಲೇಖಿಸಿಲ್ಲ ಎಂದರೆ ಸರಿ.

2. ಈ ದಾವೆಯನ್ನು ನನ್ನ ತಂದೆ ದಾಖಲಿಸಿದ್ದು, ಸದರಿ ವಿಚಾರಗಳು ನನಗೆ ಗೊತ್ತಿದೆ. 1 ನೇ ಪ್ರತಿವಾದಿ ನಮ್ಮ ಜಾಗದಲ್ಲಿ ಒತ್ತುವರಿ ಮಾಡಿ ಮನೆ ಕಟ್ಟಿರುವ ವಿಚಾರವಾಗಿ ಪ್ರಸ್ತುತ ದಾವೆಯನ್ನು ನನ್ನ ತಂದೆ ಹೂಡಿರುತ್ತಾರೆ. ನನ್ನ ತಂದೆ ಈ ದಾವೆ ಹೂಡುವ ಪೂರ್ವ 1ನೇ ಪ್ರತಿವಾದಿ 2 ವರ್ಷಗಳ ಹಿಂದೆ ನನ್ನ ತಂದೆಯ ವಿರುದ್ದ ಅಸಲು ದಾವಾ ನಂ 52/2021 ರಂತೆ ಖಾನೆ ಸುಮಾರಿ ನಂ 82, ಆಸ್ತಿ ನಂ 42 ರ ವಿಚಾರವಾಗಿ ದಾವೆ ಹೂಡಿರುತ್ತಾರೆ ಎಂದರೆ ಸರಿ. ಅದರಂತೆ ನ್ಯಾಯಾಲಯ ನನ್ನ ತಂದೆ ಮತ್ತು ಅವರ ಸಹೋದರರವಿರುದ್ದ ಮಧ್ಯಂತರ ಆದೇಶವನ್ನು ಮಾಡಿದೆ ಎಂದರೆ ಸರಿ. ಸದರಿ ಮಧ್ಯಂತರ ಆದೇಶವಾದ ತರುವಾಯ ಮತ್ತು ಪಂಚಾಯತಿಯಿಂದ ಪರವಾನಿಗೆಯನ್ನು ಪಡೆದು 1 ನೇ ಪ್ರತಿವಾದಿ ಮನೆಯನ್ನು ನಿರ್ಮಾಣ ಮಾಡಿದ್ದಾರೆ ಎಂದರೆ ಸರಿ. ಸದರಿ ವಿಚಾರವನ್ನು ನಾನಾಗಲಿ ನನ್ನ ತಂದೆಯಾಗಲಿ ಈ ದಾವೆಯಲ್ಲಿ ನಮ್ಮ ವಕೀಲರಿಗೆ ತಿಳಿಸಿಲ್ಲ ಎಂದರೆ ಸರಿ. ಹಾಗಾಗಿ ನಾನು ವಸ್ತು ಸ್ಥಿತಿಯನ್ನು ಮರೆಮಾಚಿ ಈ ದಾವೆ ಹೂಡಿದ್ದೆವೆ ಎಂದರೆ ಸರಿಯಲ್ಲ.

3. ದಾವಾಸ್ತಿ ನಮ್ಮ ಕುಟುಂಬಕ್ಕೆ 1983-84ರಲ್ಲಿ ಸರ್ಕಾರದಿಂದ ನಮ್ಮ ಕುಟುಂಬಕ್ಕೆ ಮಂಜೂರಾಗಿರುತ್ತದೆ. ನಿವೇಶನ ಸಂಖ್ಯೆ 45 ನನ್ನ ತಂದೆಯ ತಂದೆಯಾದ ಉಜ್ಜಿನಪ್ಪ ಬಿನ್ ಸಿದ್ದಪ್ಪನವರಿಗೆ ಮತ್ತು ನಿವೇಶನ ಸಂಖ್ಯೆ 46 ನನ್ನ ತಂದೆಯ ಅಣ್ಣನಾದ ದೇವೆಂದ್ರಪ್ಪ ಬಿನ್ ಉಜ್ಜಿನಪ್ಪನವರ ಹೆಸರಿಗೆ ಮಂಜೂರಾಗಿರುತ್ತದೆ. ಸದರಿ ಎರಡೂ ನಿವೇಶನಗಳ ಅಳತೆ ಪೂರ್ವ-ಪಶ್ಚಿಮ 40 ಅಡಿ, ಉತ್ತರ -ದಕ್ಷಿಣ 60 ಅಡಿ ಇದೆ ಎಂದರೆ ಸರಿ. ಸಂದರಿ ಎರುಡೂ ನಿವೇಶನಗಳು ಒಂದಕ್ಕೊಂದು ಲಗತ್ತಾಗಿದೆ ಎಂದರೆ ಸರಿ. ಸದರಿ ಮಂಜೂರಾದ ಎರಡೂ ಆಸ್ತಿಗಳಲ್ಲಿ ನನ್ನ ತಂದೆ ಮತ್ತು ಆತನ ಸಹೋದರರ ನಡುವೆ ಯಾವಾಗ ಆಸ್ತಿ ಹಂಚಿಕೆಯಾಯಿತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ಆತ ಸಹೋದರರು 25-30ವರ್ಷಗಳಿಂದ ಪ್ರತ್ಯೇಕವಾಗಿ ವಾಸವಾಗಿದ್ದಾರೆ.

ಹಾಗಾಗಿ ಸದರಿ 25-30 ವರ್ಷಗಳ ಹಿಂದೆಯೇ ಸದರಿ ಆಸ್ತಿಗಳು ಸಹ ವಿಭಜನೆಯಾಗಿವೆ ಎಂದರೆ ಸರಿ. ಅದರಂತೆ ಸದರಿ ಎರಡೂ ಆಸ್ತಿಗಳಲ್ಲಿ ನನ್ನ ಚಿಕ್ಕಪ್ಪನಾದ ನಾಗೇಂದ್ರಪ್ಪನಿಗೆ ಪೂರ್ವ ದಿಕ್ಕಿನ ಪೂರ್ವ-ಪಶ್ಚಿಮ 24 ಅಡಿ, ಉತ್ತರ -ದಕ್ಷಿಣ 60 ಅಡಿ, ಹಂಚಿಕೆಯಾಗಿದ್ದು ಸದರಿ ವಿಸ್ತೀರ್ಣದಲ್ಲಿ ನನ್ನ ಚಿಕ್ಕಪ್ಪ ಮನೆ ಕಟ್ಟಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆ ಮತ್ತು ಆತನ ಸಹೋದರರು 20 ಇಂಟು 60 ಅಡಿಗಳಂತೆ ಸಮನಾಗಿ ಹಿಸ್ಸೆ ಮಾಡಿಕೊಂಡಿದ್ದು ಅದರಂತೆ ಮನೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

4. ನಾಗೇಂದ್ರಪ್ಪನವರು ಮನೆ ಕಟ್ಟಿ 20 ವರ್ಷಗಳ ಮೇಲಾಗಿದೆ. ಸದರಿ ನಾಗೇಂದ್ರಪ್ಪನ ಹಿಸ್ಸೆಯ ಪಕ್ಕ, ಶಿವಲಿಂಗಪ್ಪನವರಿಗೂ ಸಹ 24 ಇಂಟು 60 ಅಡಿ ಹಂಚಿಕೆಯಾಗಿದೆ ಎಂದರೆ ಸರಿಯಲ್ಲ. ಸದರಿಯವರೂ ಸಹ ಮನೆ ಕಟ್ಟಿರುತ್ತಾರೆ ಎಂದರೆ ಸಾಕ್ಷಿ 20 ಇಂಟು 60 ಅಡಿಯಲ್ಲಿ ಮನೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನಾಗೆಂದ್ರಪ್ಪ ಮತ್ತು ಶಿವಲಿಂಗಪ್ಪನವರ ಮನೆಗಳ ನಡುವೆ ಯಾವುದೇ ಖಾಲಿ ಜಾಗ ಇಲ್ಲ ಎಂದರೆ ಸರಿ. ಸದರಿ ಶಿವಲಿಂಗಪ್ಪನವರ ಮನೆಯ ಪಶ್ಚಿಮ ದಿಕ್ಕಿಗೆ 1ನೇ ಪ್ರತಿವಾದಿಯ ಮನೆ ಬರುತ್ತದೆ. ಸದರಿಯವರು ಪೂರ್ವ-ಪಶ್ಚಿಮ ಎಷ್ಟು ಅಡಿಗಳಲ್ಲಿ ಮನೆಕಟ್ಟಿರುತ್ತಾರೆ ಎಂದು ನಾನು ಅಳತೆ ಮಾಡಿರುವುದಿಲ್ಲ. ಸದರಿಯವರು ಉತ್ತರ ದಿಕ್ಕಿಗೆ ಮನೆಯನ್ನು ಕಟ್ಟಿರುತ್ತಾರೆ, ಸದರಿಯವರ ಮನೆ ಪೂರ್ವ-ಪಶ್ಚಿಮ 16 ಅಡಿ ಮತ್ತು ಉತ್ತರ-ದಕ್ಷಿಣ 32 ಅಡಿ ಜಾಗದಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸಾಕ್ಷಿ ಅದರಲ್ಲಿ ನಮ್ಮ 4 ಅಡಿ ಜಾಗವನ್ನು ಒತ್ತುವರಿ ಮಾಡಿ ಮನೆ ಕಟ್ಟಿರುವ ಕಾರಣ ಈ ದಾವೆ ಹೂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ 1 ನೇ ಪ್ರತಿವಾದಿಯ ಮನೆಯ ಹಿಂದೆ ಖಾಲಿ ಜಾಗವಿದೆ ಎಂದರೆ ಸರಿ. ಸದರಿ 1 ನೇ ಪ್ರತಿವಾದಿಯ ಮನೆಯ ಪಶ್ಚಿಮ ದಿಕ್ಕಿಗೆ ನಮಗೆ ಸೇರಿದ ಪೂರ್ವ-ಪಶ್ಚಿಮ 16 ಅಡಿ, ಉತ್ತರ-ದಕ್ಷಿಣ 60 ಅಡಿ ಖಾಲಿ ಜಾಗವಿದ್ದು ಅದರಲ್ಲಿ ನಾವು ದಕ್ಷಿಣ ದಿಕ್ಕಿನಲ್ಲಿ 1 ನೇ ಪ್ರತಿವಾದಿಯ 2 ಅಡಿ ಖಾಲಿಜಾಗವನ್ನು ಒತ್ತುವರಿ ಮಾಡಿಕೊಂಡು ಮನೆ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾವು 1 ನೇ ಪ್ರತಿವಾದಿಯ ಆಸ್ತಿಯಲ್ಲಿ ಒತ್ತುವರಿ ಮಾಡಿ ಮನೆ ಕಟ್ಟಲು ಹೋದ ಕಾರಣ 1 ನೇ ಪ್ರತಿವಾದಿ ತಕರಾರು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

5. 1ನೇ ಪ್ರತಿವಾದಿ ಶಿವಲಿಂಗಪ್ಪನವರ ಮನೆಗೆ ಹೊಂದಿಕೊಂಡಂತೆ ನ್ಯಾಯಾಲಯದ ಆದೇಶವನ್ನು ಪಡೆದು ಮತ್ತು ಪಂಚಾಯತಿಯಿಂದ ಪರವಾನಿಗೆಯನ್ನು ಪಡೆದು ಉತ್ತರ - ದಕ್ಷಿಣವಾಗಿ 32, ಪೂರ್ವ-ಪಶ್ಚಿಮವಾಗಿ 16 ಅಡಿಗಳಿಗೆ ಉತ್ತರ ದಿಕ್ಕಿನಲ್ಲಿ ಆರ್ ಸಿ ಸಿ ಮನೆ

ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಮನೆಯನ್ನು 2013 ರಲ್ಲಿ ಕಟ್ಟಿದ್ದು 2 ನೇ ಪ್ರತಿವಾದಿ 2022ರಲ್ಲಿ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 2013ರಲ್ಲಿ ನಾವು ಮನೆಯನ್ನು ಕಟ್ಟುವ ಸಮಯಕ್ಕೆ ಪಂಚಾಯತಿಯಿಂದ ಪರವಾನಿಗೆಯನ್ನು ಪಡೆದಿರುತ್ತೇವೆ. ಸದರಿ ಪರವಾನಿಗೆ 20 ಅಡಿ ಅಗಲ, 120 ಅಡಿ ಉದ್ದದ ಜಾಗಕ್ಕೆ ಪರವಾನಿಗೆಯನ್ನು ಪಡೆದಿರುತ್ತೇನೆ. ಸದರಿ ವಿಚಾರವನ್ನು ನನ್ನ ವಾದಪತ್ರದಲ್ಲಿ ನಮೂದಿಸಿಲ್ಲ. ನಾನು ಪಂಚಾಯತಿಯಿಂದ ಯಾವುದೇ ಪರವಾನಿಗೆಯನ್ನು ಪಡೆಯದೆ ಇದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪರವಾನಿಗೆ ಪಡೆಯದೆ ಇದ್ದ ಕಾರಣ ಸದರಿ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ. ಎಂದರೆ ಸರಿಯಲ್ಲ.

6. ನಿಪಿ-2 ರಲ್ಲಿ ನನ್ನ ತಂದೆ ಮತ್ತು ಆತನ ಸಹೋದರರ ನಡುವೆ ಸುಮಾರು 25 ವರ್ಷಗಳ ಹಿಂದೆ ಆದ ಆಸ್ತಿ ಹಂಚಿಕೆ ಕುರಿತು ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ನಿಪಿ-2 ರಲ್ಲಿ ಈ ಹಿಂದೆ ಆದಂತಹ ಪಾಲುವಿಭಾಗದ ಆಸ್ತಿಗಳ ಕುರಿತು ನಮೂದಿಸಿಲ್ಲ ಎಂದರೆ ಸರಿ. ನಿಪಿ-2 ನ್ನು ಪಂಚಾಯತಿಯಿಂದ ಇ-ಸ್ವತ್ತು ಪಡೆಯುವ ಉದ್ದೇಶಕ್ಕಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಾವು ದಾವಾಸ್ತಿಯಲ್ಲಿ ಮನೆಯನ್ನು ಕಟ್ಟಿದ ತರುವಾಯ ನಿಪಿ-2 ನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಹಾಗಾಗಿ ನಾವು ಮನೆಯನ್ನು ಪೂರ್ವ-ಪಶ್ಚಿಮ 18ವರೆ ಅಡಿ ಜಾಗದಲ್ಲಿ ಕಟ್ಟಿರುತ್ತೇವೆ. ನಮಗೆ ನಿಪಿ-2ಕ್ಕೂ ಮನ್ನ ಆದಂತಹ ವಿಭಾಗದ ಮೂಲಕ ಪೂರ್ವ-ಪಶ್ಚಿಮವಾಗಿ 4 ವರೆ ಮೀಟರ್ ಮತ್ತು ಉತ್ತರ -ದಕ್ಷಿಣವಾಗಿ 18 ಕಾಲು ಮೀಟರ್ ಜಾಗ ಮಾತ್ರ ಬಂದಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಆತನ ಸಹೋದರರ ನಡುವೆ ವಿಭಾಗವಾದ ಕಾಲಕ್ಕೆ ನಾನು ಅಪ್ರಾಪ್ತ ವಯಸ್ಕನಾಗಿದ್ದೆ ಎಂದರೆ ಸರಿ. ಹಾಗಾಗಿ ನನ್ನ ತಂದೆ ಮಾಡಿಕೊಂಡಂತ ವಿಭಾಗಪತ್ರದ ವಸ್ತುಸ್ಥಿತಿ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಅನುಭವದಲ್ಲಿ ಅಗಿನಿಂದಲೂ 20 ಇಂಟು 60 ಅಡಿ ಜಾಗದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ನನ್ನ ತಂದೆ ಸದರಿ 20 ಇಂಟು 60 ಅಡಿ ವಿಭಾಗ ಮಾಡಿಕೊಂಡ ಬಗ್ಗೆ ದಾಖಲೆ 2014ರಿಂದಲೂ ಇದೆ. ಅದಕ್ಕೂ ಹಿಂದೆ 25 ವರ್ಷಗಳ ಹಿಂದೆ ಅದ ವಿಭಾಗದ ಕುರಿತು ಸಹದಾಖಲೆಗಳು ಇವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ತನ್ನ ಪರವಾಗಿ ಹಾಜರುಪಡಿಸಿದ ದಾಖಲೆಗಳ ಪಟ್ಟಿಯನ್ನು ತೋರಿಸಲಾಗಿ ಸದರಿ ಪಟ್ಟಿಯಲ್ಲಿ ತಾನು ಹೇಳಿದಂತ ನಿಪಿ-9ರ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ನಿಪಿ-9 ರಲ್ಲಿ ಯಾವುದೇ ಅಳತೆ ನಮೂದು ಇಲ್ಲ ಎಂದರೆ ಸರಿ.

7. ಹಾಗಾಗಿ 20 ಇಂಟು 60 ಅಡಿಯ ಆಸ್ತಿ ನನ್ನ ತಂದೆಗೆ ವಿಭಾಗವಾದ ಕುರಿತು 25-30 ವರ್ಷಗಳಿಂದ ದಾಖಲೆ ಇದೆ. ಸದರಿ ವಿಸ್ತೀರ್ಣವನ್ನು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿ ನಮ್ಮ ವಕೀಲರ ಬಳಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣಾ ಪ್ರ.ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ.

8. ನನ್ನ ತಂದೆಯಾದ ವಾದಿ ಸಾಕ್ಷ ನುಡಿಯಲು ಬಂದರೆ ನಿಜ ಸಂಗತಿ ಗೊತ್ತಾಗುವುದನ್ನು ಮರೆಮಾಚಲು ನನ್ನ ತಂದೆ ಆರೋಗ್ಯವಾಗಿದ್ದರು ಸಹ ನಾನು ಅವರಿಂದ ಜಿ ಪಿ ಎ ಯನ್ನು ಪಡೆದು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.